ಸಹಾಯಕ ಕಾರ್ಯಪಾಲಕ ಅಭಿಯಂತರವರ ಕಛೇರಿ,
ನಂ.4 ಕಟ್ಟಡಗಳ ಉಪವಿಭಾಗ
ಲೋಕೋಪಯೋಗಿ ಇಲಾಖೆ, ಬೆಂಗಳೂರು–560 001.

ದೂರವಾಣಿ ಸಂಖ್ಯೆ: 080–22267585
ಇ–ಮೇಲ್: aeeno4bldg@gmail.com

# ಲೋಕೋಪಯೋಗಿ ಇಲಾಖೆ

ಸಂ: ಸಕಾಅ/ಕಉವಿ–4/ಸ.ಇಂ/ಕ.ದೃಢೀಕರಣ ಪತ್ರ/2022–23/1283 ದಿನಾಂಕ: 27/02/2023

ಇವರಿಗೆ,

ಅಧ್ಯಕ್ಷರು, ಹೆಚ್.ಕೆ.ಇ.ಸೊಸೈಟಿ,
ನ್ಯಾಷನಲ್ ಪಬ್ಲಿಕ್ ಸ್ಕೂಲ್,
ನಂ. 14/A , 15ನೇ ಮುಖ್ಯ ರಸ್ತೆ,
9ನೇ ಕ್ರಾಸ್, ಆರ್.ಎಂ.ವಿ ಎಕ್ಸ್‌ಟೆನ್ಷನ್
ಸದಾಶಿವನಗರ ಬೆಂಗಳೂರು.

ಮಾನ್ಯರೆ,

ವಿಷಯ: ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ

ಉಲ್ಲೇಖ: 1. H.K.E Socity, 15th Main, 9th Cross, RMV Extension, Sadashivanagara Bangalore -560 080 ರವರ ಪತ್ರ ದಿನಾಂಕ 11.01.2023
2. ಕರ್ನಾಟಕ ಸರ್ಕಾರ ಅಪರ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ ರವರ ಸುತ್ತೋಲೆ ಪತ್ರ ಸಂಖ್ಯೆ: ಲೋ.ಇ 59 ಬಿಇಡಿ 2019 ಸರ್ಕಾರದ ಸಚಿವಾಲಯ ವಿಕಾಸ ಸೌಧ ಬೆಂಗಳೂರು ದಿ: 07.05.2022

* * *

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, H.K.E Socity, ರವರ ವತಿಯಿಂದ ನಡೆಸುತ್ತಿರುವ ನ್ಯಾಷನಲ್ ಪಬ್ಲಿಕ್ ಸ್ಕೂಲ್, 15ನೇ ಮುಖ್ಯ ರಸ್ತೆ 9ನೇ ಕ್ರಾಸ್ ಆರ್.ಎಂ.ವಿ ಎಕ್ಸ್‌ಟೆನ್ಷನ್ ಸದಾಶಿವನಗರ ಬೆಂಗಳೂರು ಇಲ್ಲಿನ ಶಾಲಾ ಕಟ್ಟಡಕ್ಕೆ ಉಲ್ಲೇಖ (1) ರ ತಮ್ಮ ಪತ್ರ ದಿನಾಂಕ 15.02.2023 ರಲ್ಲಿ ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿರುತ್ತೀರಿ, ಅದರನ್ವಯ ಈ ಕಛೇರಿಯ ಪತ್ರ ದಿನಾಂಕ: 06.02.2023 ರಲ್ಲಿ National Building Code of India – 2016 ರ ಪ್ರಕಾರ ಅಗತ್ಯ ಪರೀಕ್ಷೆಗಳನ್ನು ಕೈಗೊಂಡು ಅವುಗಳ ಪರೀಕ್ಷಾ ವರದಿ ಹಾಗೂ ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ತಿಳಸಲಾಗಿದ್ದು, ಅದರಂತೆ ದಿ.17.02.2023 ರಂದು ಸದರಿ ಶಾಲಾ ಕಟ್ಟಡವನ್ನು ಪರಿಶೀಲಿಸಲಾಗಿ, ನೀವುಗಳು ಒದಗಿಸಿರುವ ನಕ್ಷೆ/ದಾಖಲೆಗಳ ಪ್ರಕಾರ ಕಟ್ಟಡವನ್ನು ಸಿ.ಎ. ನಿವೇಶನ ಸಂಖ್ಯೆ:14/A ನಲ್ಲಿ 2020ನೇ ವರ್ಷದಲ್ಲಿ ನಿರ್ಮಿಸಿರುವುದು, ತಿಳಿದು ಬರುತ್ತದೆ. ನೆಲ+04 ಮೇಲಂತಸ್ತು ಹೊಂದಿರುವ ಬ್ಲಾಕ್–1 ಮತ್ತು ನೆಲ+02 ಮೇಲಂತಸ್ತು ಹೊಂದಿರುವ ಬ್ಲಾಕ್–2 ಕಟ್ಟಡಗಳಾಗಿರುತ್ತವೆ.

ದಿನಾಂಕ 17.02.2023 ರ ಸದರಿ ಕಟ್ಟಡವನ್ನು ಪರಿವೀಕ್ಷಣೆ ನಡೆಸಿದ ಸಂದರ್ಭದಲ್ಲಿ ನ್ಯಾಷನಲ್ ಪಬ್ಲಿಕ್ ಶಾಲೆಯ ಕನ್ಸಲ್ಟೆಂಟ್ ಶಿವಾರೆಡ್ಡಿ, ನಾಗರಾಜ್ ಮತ್ತು ಪ್ರಾಂಶುಪಾಲರಾದ ಶ್ರೀಮತಿ **ಪಿಯಾಲಿ ಶೋಮೆ** ರವರುಗಳು ಸ್ಥಳದಲ್ಲಿ ಹಾಜರಿದ್ದರು. ಸದರಿ ಕಟ್ಟಡಗಳನ್ನು 10743.41 ಚ.ಮೀಟರ್ ವಿಸ್ತೀರ್ಣದಲ್ಲಿ ನಿರ್ಮಾಣ ಮಾಡಿದ್ದು, ಕಟ್ಟಡವು ಆರ್.ಸಿ.ಸಿ. ಫ್ರೇಮ್ಡ್ ಸ್ಟ್ರಕ್ಚರ್ ಆಗಿದ್ದು, ಪಿ.ವಿ.ಸಿ. ಕಿಟಕಿ, ಮರದ ಬಾಗಿಲುಗಳು ಮತ್ತು ನೆಲಹಾಸುಗೆ ವೆಟ್ರಿಫೈಡ್ ಟೈಲ್ಸ್ ಅಳವಡಿಸಲಾಗಿರುತ್ತದೆ. ಸದರಿ ಕಟ್ಟಡದಲ್ಲಿ ಒಟ್ಟು 51 ಶಾಲಾ ಕೊಠಡಿಗಳಿರುವುದು (ಶೌಚಾಲಯ, ಗಣ್ಯರ ಕೊಠಡಿಗಳು ಹಾಗೂ ಮೀಟಿಂಗ್ / ಸೆಮಿನಾರ್ ಹಾಲ್ ಗಳನ್ನು ಹೊರತುಪಡಿಸಿ) ಕಂಡುಬಂದಿದ್ದು, National Building Code of India – 2016 ರ ಮಾನದಂಡದಂತೆ ನಿರ್ಮಿಸಲಾಗಿದೆ, ಎಂದು ದೃಢೀಕರಣ ಪತ್ರ ಸಲ್ಲಿಸಿರುತ್ತೀರಿ.

P 70

ಸದರಿ ಶಾಲಾ ಕಟ್ಟಡವನ್ನು 2020ರಲ್ಲಿ ನಿರ್ಮಿಸಿರುವುದಾಗಿ ತಿಳಿಸಿರುವುದರಿಂದ ಉಲ್ಲೇಖಿತ (2)ರ ಸರ್ಕಾರದ ಸುತ್ತೋಲೆಯಲ್ಲಿ ತಿಳಿಸಿರುವಂತೆ 05 ವರ್ಷಕ್ಕಿಂತ ಒಳಗಿನ ಅವಧಿಯಲ್ಲಿ ನಿರ್ಮಾಣಗೊಂಡು ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಕಟ್ಟಡಗಳಿಗೆ ಅರ್ಜಿ ನಮೂನೆಯಲ್ಲಿ ತಿಳಿಸಿರುವ ದಾಖಲೆಗಳು ಲಭ್ಯವಿದ್ದಲ್ಲಿ Non Destructive Test ಗಳನ್ನು ಕೈಗೊಳ್ಳವುದು ಕಡ್ಡಾಯವಿರುವುದಿಲ್ಲವೆಂದು ತಿಳಿಸಿರುವ ಮೇರೆಗೆ Sri. Divakar Y, Structural Engineer Reg. No. BCC/BL-3.6/SE/282/2018-19, Sun Designers, Sun edifice, No. 19, 20th Main West of Chord road, 1st R Block, Rajajinagara, Bangalore -10 ರವರು ಕಟ್ಟಡಕ್ಕೆ ಸಂಬಂಧಪಟ್ಟಂತೆ Certificate for Structural Design Sufficiency Report (Annex C Clause 12.2.8) and Certificate for completed Structural Design wroks as per structural safety requirements Report (Annex J Clause 13.2(f)) ಗಳನ್ನು ನೀಡಿದ್ದು, ಸದರಿ ವರದಿಗಳನ್ನು ಪರಿಶೀಲಿಸಲಾಗಿ, ವರದಿಗಳು ತೃಪ್ತಿಕರವಾಗಿರುತ್ತದೆ.

ಈ ಕೆಳಕಂಡಂತೆ ಅಗತ್ಯ ದಾಖಲೆಗಳನ್ನು ಸಲ್ಲಿಸಲಾಗಿರುತ್ತದೆ.

1. Annexure – C as per N.B.C-2016.
2. Structural Frame work of columns, Beams, slabs layout Drawings
3. Building Sanctioned Plan by BBMP

ಉಲ್ಲೇಖ (2) ರ ಸರ್ಕಾರದ ಸುತ್ತೋಲೆಯಲ್ಲಿನ ಕ್ರಮ ಸಂಖ್ಯೆ (2) ರಲ್ಲಿ ಸೂಚಿಸಿರುವಂತೆ ನಗರ ಪ್ರದೇಶದಲ್ಲಿ ಒಂದು ಶಾಲೆಗೆ / ಕಾಲೇಜಿಗೆ – ರೂ. 5,000.00 ಗಳನ್ನು ಶುಲ್ಕವಾಗಿ ಪಾವತಿಸಲು ಸೂಚಿಸಿರುವ ಹಿನ್ನಲೆಯಲ್ಲಿ ಸದರಿ ಸಂಸ್ಥೆಯವರು ಚಲನ್ ಉಲ್ಲೇಖ ಸಂಖ್ಯೆ: CR0223005900510901 dtd. 17.02.2023 ರಲ್ಲಿ ರೂ. 5,000.00 ಗಳನ್ನು ಪಾವತಿಸಿರುತ್ತಾರೆ.

ಕಟ್ಟಡವನ್ನು ಕೂಲಂಕುಶವಾಗಿ ಪರಿಶೀಲಿಸಲಾಗಿ, ಕಟ್ಟಡದ ಗೋಡೆಗಳಲ್ಲಾಗಲಿ, ಮೇಲ್ಛಾವಣಿ/ಸೀಲಿಂಗ್ & ಬೀಮ್‌ಗಳಲ್ಲಾಗಲಿ ಬಿರುಕುಗಳು, ತೇವಾಂಶ, ಇತ್ಯಾದಿ ಕಂಡುಬಂದಿರುವುದಿಲ್ಲ. ಈ ಹಿನ್ನಲೆಯಲ್ಲಿ ಮೇಲ್ನೋಟಕ್ಕೆ ಕಟ್ಟಡವು ಸದೃಢ/ಸುರಕ್ಷಿತವಾಗಿದೆ ಎಂದು ಅಭಿಪ್ರಾಯಿಸಬಹುದು. ಸದರಿ ಕಟ್ಟಡಗಳ ನಿರ್ವಹಣೆ ಮಾಡುವ ಜವಬ್ದಾರಿಯು ಸದರಿ ವಿದ್ಯಾಸಂಸ್ಥೆಯವರದಾಗಿರುತ್ತೆದೆ.

ಮುಂದುವರೆದು, ಮುಂದಿನ ದಿನಗಳಲ್ಲಿ ಕಟ್ಟಡದಲ್ಲಿ ಯಾವುದಾದರೂ ಬದಲಾವಣೆ ಅಥವಾ ಹೆಚ್ಚುವರಿಯಾಗಿ ನಿರ್ಮಾಣ ಮಾಡಿದಲ್ಲಿ ಹಾಗೂ ಕಟ್ಟಡದ ಮಂಜುರಾದ ನಕ್ಷೆಗೆ ವಿರುದ್ದವಾಗಿ ಯಾವುದಾದರು ಬದಲಾವಣೆ ಅಥವಾ ನಿರ್ಮಾಣ ಮಾಡಿದಲ್ಲಿ ಈ ದೃಢೀಕರಣಾ ಪತ್ರವೂ ತನ್ನಿಂತಾನೆ ರದ್ದುಗೊಳ್ಳುವುದು ಹಾಗು ಈ ಪತ್ರವನ್ನು 'H.K.E Socity ರವರ ವತಿಯಿಂದ ನಡೆಸುತ್ತಿರುವ ನ್ಯಾಷನಲ್ ಪಬ್ಲಿಕ್ ಸ್ಕೂಲ್, 15ನೇ ಮುಖ್ಯ ರಸ್ತೆ, 9ನೇ ಕ್ರಾಸ್ ಆರ್.ಎಂ.ವಿ ಎಕ್ಸ್‌ಟೆನ್ಷನ್ ಸದಾಶಿವನಗರ, ಬೆಂಗಳೂರು ಇಲ್ಲಿನ ಶಾಲಾ ಕಟ್ಟಡಕ್ಕೆ ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರ ಬಳಸಬಹುದಾಗಿರುತ್ತದೆ. ಹಾಗೂ ಈ ದೃಢೀಕರಣಾ ಪತ್ರವನ್ನು ಯಾವುದೇ ಸಮಯದಲ್ಲಿ ಹಿಂಪಡೆಯುವ ಷರತ್ತಿಗೆ ಒಳಪಟ್ಟಿರುತ್ತದೆ.

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಅಭಿಯಂತರರು,
ನಂ.4 ಕಟ್ಟಡಗಳ ಉಪವಿಭಾಗ,ಬೆಂಗಳೂರು.

Assistant Executive Engineer
No. 4, Buildings, Sub-Division
Bangalore - 560 001.